5

# ಅಧೀನರಾಗಿದ್ದು ದೈವ ಭಕ್ತಿಯ ಜೀವಿತವನ್ನು ಜೀವಿಸಿರಿ (1 ಪೇತ್ರ 2:11-25)

ಅಧೀನತೆಯು, ಕ್ರೈಸ್ತ ಜೀವಿತದ ಬಹು ಮುಖ್ಯ ಭಾಗವಾಗಿರುತ್ತದೆ.

ಪೇತ್ರನು ಅಧೀನತೆಯ ಕುರಿತಾಗಿ ಮಾತನಾಡುವದಕ್ಕಿಂತ ಮೊದಲು ಅಧೀನತೆಯನ್ನು ಕ್ರಮವಾಗಿ ಇರಿಸಿಕೊಳ್ಳಲು, ಸಹಾಯಕವಾಗುವ ಕೆಲವು ಸಲಹೆಗಳನ್ನು ಸಹ ನೀಡಿದ್ದಾನೆ.

## ನಿಂದೆಗೆ ಒಳಗಾಗದಂತೆ ದೈವ ಭಕ್ತಿಯ ಜೀವಿತವನ್ನು ಜೀವಿಸಿರಿ (2:11, 12)

ಮನುಷ್ಯನ ತಾತ್ಕಾಲಿಕ ಸ್ವಭಾವದ ಕುರಿತು, ಪೇತ್ರನು ಈಗಾಗಲೇ, ಎರಡು ಸಾರಿ ವಿಶ್ಲೇಷಿಸಿದ್ದಾನೆ, ಅವನ ಓದುಗರು ಪರದೇಶಿಗಳಾಗಿರುವದರಿಂದ, ಅವರಿಗೆ ನಿಜವಾದ ವಿಶ್ರಾಂತಿಯ ಸ್ಥಳವು ಇರುವದಿಲ್ಲ, ಅವರಿಗೆ ಯಾವುದೇ ಸ್ವಾಸ್ತವು ಇರುವದಿಲ್ಲ. ಪ್ರಾರಂಭಿಕ ಪದಗಳು ಈ ರೀತಿ ಹೇಳುತ್ತದೆ, "ಪ್ರವಾಸಿಗಳಾದ ದೇವ ಜನರಿಗೆ" (1:1) ಎಂದು ತಿಳಿಸಿದ ನಂತರ 1:17ರಲ್ಲಿ "ನಿಮ್ಮ ಪ್ರವಾಸಕಾಲವನ್ನು ಭಯಭಕ್ತಿಯುಳ್ಳವರಾಗಿ ಕಳೆಯಿರಿ" 2:11ರಲ್ಲಿ ಮುಂದುವರಿಸಿ, "ಪ್ರವಾಸಿಗಳೂ ಪರ ದೇಶಸ್ಥರೂ ಆಗಿರುವ ನೀವು ನಿಮ್ಮ ಆತ್ಮದ ಮೇಲೆ ಯುದ್ಧ ಮಾಡುವ ಶಾರೀರಕ ಅಭಿಲಾಷೆಗಳಿಗೆ ದೂರವಾಗಿರಬೇಕೆಂದು ನಿಮ್ಮನ್ನು ಎಚ್ಚರಿಸುತ್ತೇನೆ, ..."

ಹಳೇ ಒಡಂಬಡಿಕೆಯ ಮೂಲ ಪಿತೃಗಳು ಪೇತ್ರನ, ಆಲೋಚನೆಗಳಿಗೆ ಸ್ಫೂರ್ತಿ ನೀಡಿದರು. ಪರದೇಶದವರು ಭಯಗ್ರಸ್ತರಾಗಿದ್ದರು, ಅವರು ಭಯಪಡುವದಕ್ಕೆ ಸಕಾರಣವಿತ್ತು. ಅವರ ಆಸ್ತಿಗಳನ್ನು ಇತರರು ವಶಪಡಿಸಿಕೊಳ್ಳಬಹುದಾಗಿತ್ತು, ಅಥವಾ ಅವರನ್ನು ಕೊಲ್ಲಬಹುದಾಗಿತ್ತು, ಇಷ್ಟಾದರು ಯಾರು ಅವರನ್ನು ಎದುರಿಸುತ್ತಿರಲಿಲ್ಲ. ಕ್ಷಾಮವು ಅಬ್ರಹಾಮನನ್ನು ಐಗಪ್ತಕ್ಕೆ ನಡೆಯಿಸಿತು, ಒಬ್ಬ ಮನುಷ್ಯನು ಸಾರಳನ್ನು ತನ್ನ ಉಪಪತ್ನಿಯಾಗಿ ತೆಗೆದುಕೊಂಡು ಅವನನ್ನು ಕೊಲ್ಲಲು ಸನ್ನದ್ಧನಾಗಿದ್ದನು. ಐಗುಪ್ತದಲ್ಲಿ ಅವನು ಪರದೇಶದವನಾಗಿದ್ದನು, ಪರದೇಶದವನು ಮಾತ್ರವಲ್ಲದೆ, ಅವನ ಹೆಂಡತಿಯು ಕಾನಾನಿನಲ್ಲಿ ಮೃತಿ ಹೊಂದಿದಾಗ, ಅಲ್ಲಿ ಅವಳನ್ನು ಸಮಾಧಿ ಮಾಡಲು ಸಾಧ್ಯವಾಗಲಿಲ್ಲ, ಅಲ್ಲಿ ಅವನು ಸ್ಥಳೀಯರ ಅನುಮತಿಯನ್ನು ಪಡೆದು ಸಮಾಧಿ ಮಾಡ ಬೇಕಾಯಿತು. ಅಲ್ಲಿ ಅವನು ವಿವರಿಸಿ, "ನಾನು ನಿಮ್ಮಲ್ಲಿ ಪರದೇಶದವನೂ ಪರವಾಸಿಯು ಆಗಿದ್ದೇನಷ್ಟೆ ತೀರಿ ಹೋಗಿರುವ ನನ್ನ ಪತ್ನಿಯ ಸಮಾಧಿಗೋಸ್ಕರ ನಿಮ್ಮಲ್ಲಿ ನನ್ನ ಸ್ವಂತಕ್ಕೆ ಭೂಮಿಯನ್ನು ಕೊಡಬೇಕೆಂದು ಕೇಳಿಕೊಂಡನು" (ಆದಿಕಾಂಡ 23:4).

ಇಸ್ರಾಯೇಲ್ಯರ ರಾಷ್ಟ್ರೀಯ ಮನಸ್ಸಾಕ್ಷಿಯು, ಅವರು ಐಗುಪ್ತದಲ್ಲಿ ಪರದೇಶಿಗಳಾಗಿದ್ದರು ಎಂಬ ನೆನಪನ್ನು ಮಾಡುತ್ತಿತ್ತು. ಇದರ ಜ್ಞಾಪಕಾರ್ಥವಾಗಿ, ಅವರು ಪರದೇಶಿಗಳನ್ನು, ಬಾಂದವ್ಯದಿಂದ ನಡಿಸಿಕೊಳ್ಳಬೇಕಿತ್ತು (ಯಾಜಕಕಾಂಡ 19:34). ತನ್ನ ಜನರು ಈ ಭೂಲೋಕಕ್ಕೆ ಸಂಬಂಧಪಟ್ಟವರು ಎಂದು ಅವರು ಎಂದಿಗೂ ತಿಳಿಯಬಾರದೆಂದು, ದೇವರು ನಿಶ್ಚಯಿಸಿದನು (ಯಾಜಕಕಾಂಡ 25:23). ಭೂಮಿಯನ್ನು ಶಾಶ್ವತವಾಗಿ ವಿಕ್ರಯಿಸಿ ಬಿಡಬಾರದು, ಯಾಕೆಂದರೆ "ಆ ಭೂಮಿ ನನ್ನದು ನಿವಾದರೋ ಪರವಾಸಿಗಳಾಗಿ ನನ್ನ ಆಶ್ರಯದಲ್ಲಿ ಇಳುಕೊಂಡವರೇ."

ಪೇತ್ರನ, ಮತ್ತು ಅವನ ಓದುಗರ ಕಾಲದಲ್ಲಿ ಇದ್ದ ಪ್ರಪಂಚವು, ಈ ಪದಗಳಿಗೆ,

ಜೀವವನ್ನು ತುಂಬುತ್ತದೆ, ಗ್ರೀಕ್ - ರೋಮಾ ಸಾಮ್ರಾಜ್ಯದ ಬಹು ಮುಖ್ಯ ಪಟ್ಟಣದ ಪೌರತ್ವವು, ಬಹಳ ಹೆಮ್ಮೆಯುಳ್ಳದ್ದಾಗಿತ್ತು. ಕ್ರೌರ್ಯದ ಅಸಿಯನಿಗೆ, ಪೌಲನು, "ನಾನು ಯೆಹೂದ್ಯನು ತಾರ್ಸದವನು, ಕಿಲಿಕ್ಯ ಸೀಮೆಯ ಪ್ರಖ್ಯಾತವಾದ ಪಟ್ಟಣದವನು ಎಂದನು" (ಅಪೊಸ್ತಲರಕೃತ್ಯಗಳು 21:39). ಗ್ರೀಕರು ತಮ್ಮ ಪೌರತ್ವವನ್ನು ಸಾರ್ವಜನಿಕವಾಗಿ ಪ್ರಕಟಿಸಿಕೊಳ್ಳಲು ಕರೆ ಹೊಂದಿದ್ದರು. ಅವರು ತಮ್ಮದೇ ಆದ ಪಟ್ಟಣದಲ್ಲಿ ಇರುವಂಥದ್ದು ಅವರಿಗೆ ಹೆಮ್ಮೆಯ ವಿಷಯವಾಗಿದ್ದು, ಅಥವಾ ಅವರಲ್ಲಿಯೂ, ಅವರ ಸುತ್ತಮುತ್ತಲಿನವರಿಗೂ ಈ ಅವಕಾಶವೂ ಇರಲಿಲ್ಲ. ಕ್ಷಣಿಕವಾಗಿ ತಂಗಲು ಬಂದವರಿಗೂ ಮತ್ತು ವಲಸೆಯಾಗಿ ಬಂದವರಿಗೂ ಅವರಿಗೆ ಆ ಪಟ್ಟಣದಲ್ಲಿ ಪೌರತ್ವವಾಗಲೀ ಮತ್ತು ಭವಿಷ್ಯದ ಕುರಿತು ಹೇಳಲು ಯಾವುದೇ ಹಕ್ಕು ಭಾಧ್ಯತೆಗಳಿರಲಿಲ್ಲ. ಅವರು ಪರದೇಶಿಗಳು ಮತ್ತು ಅನ್ಯರಾಗಿ ಅವರ ಮಧ್ಯದಲ್ಲಿ ಜೀವಿಸುವವರಾಗಿದ್ದರು.

ಪರಸ್ಥಳದಲ್ಲಿ, ಪರನಿವಾಸಿಯಾಗಿರುವವನಿಗೆ ಯಾವುದೇ ವಿಧದಲ್ಲೂ, ತನಗಾಗಿ ಏನನ್ನಾದರು ನಿರಂತರವಾಗಿ; ಪಡೆದು ಕೊಳ್ಳಲು ಅಸಾಧ್ಯವಾಗಿತ್ತು, ಎಂದು ಪೇತ್ರನು ಚಿಕ್ಕ ಆಲೋಚನೆಯನ್ನು ನೀಡುವವನಾಗಿದ್ದಾನೆ. ಮುಂದೆ, ಅವನು ವಿಶ್ಲೇಷಿಸಿ, ನಿಮ್ಮ ಆತ್ಮದ ಮೇಲೆ "ಯುದ್ಧ ಮಾಡುವ" ಶಾರೀರಿಕ ಅಭಿಲಾಷೆಗಳಿಗೆ ದೂರವಾಗಿರ ಬೇಕೆಂದು ಎಚ್ಚರಿಸಿದ್ದಾನೆ (2:11). ಇಲ್ಲಿ ತಾತ್ಕಾಲಿಕವಾದದಕ್ಕೂ ಮತ್ತು ನಿರಂತರವಾದದ್ದಕ್ಕೂ ನಡುವೆ ಇರುವ ವ್ಯತ್ಯಾಸವನ್ನು ಸೂಚಿಸುತ್ತಿದ್ದಾನೆ; ನಶಿಸಿಹೋಗುವ ಮತ್ತು ನಶಿಸಲಾರದ ವಿಷಯಗಳ ಕುರಿತು ವ್ಯತ್ಯಾಸವನ್ನು ತೋರಿಸುತ್ತಿದ್ದಾನೆ. "ನಿನ್ನನ್ನು ನಾಶಪಡಿಸುವ ವಿಷಯಗಳಿಂದ ದೂರವಾಗಿರು ಎಂದು ಎಚ್ಚರಿಸುತ್ತಿದ್ದಾನೆ."

ಈ ಲೋಕದ ಅಭಿಲಾಷೆಗಳು ಯಾವಾಗಲೂ ನಮ್ಮ ಸಂಗಡ ಇರುತ್ತವೆ ಎಂದು ತಿಳಿದು ಜೀವಿಸುವುದು ಮೂರ್ಖತನವಾಗುತ್ತದೆ. ದೈವಭಕ್ತಿಯ ಜೀವಿತವನ್ನು ಜೀವಿಸಲು ಇತರೆ ಕಾರಣಗಳು ನಮಗೆ ಇರುತ್ತವೆ, ಕ್ರೈಸ್ತರು ಉತ್ತಮವಾದ ಜೀವಿತವನ್ನು ಜೀವಿಸುವಾಗ, ದೇವರಿಗೆ ಮಹಿಮೆಯಾಗುತ್ತದೆ, ಮತ್ತು ಆತನ ಹೆಸರಿಗೆ ಘನತೆ ಉಂಟಾಗಬೇಕು (2:12). ಒಳ್ಳೆಯ ಸಾಕ್ಷಿಯು ವೈರಿಯಲ್ಲಿರುವ ದ್ವೇಷವನ್ನು ಮತ್ತು ಇಲ್ಲದಿರುವದನ್ನು ಹೊರಗೆಡಹುತ್ತದೆ. ಅದು ಹುಳಿಯ ಕಾರ್ಯನಿರ್ವಹಿಸಿ ಇತರರನ್ನು ತನ್ನ ಬಳಿಗೆ ಆಕರ್ಷಿಸುತ್ತದೆ. ಕ್ರೈಸ್ತರು ಅನ್ಯನಾಗಿದ್ದರಿಂದ ಶಾರೀರಿಕ ದುರಾಶೆಗಳನ್ನು ತ್ಯಜಿಸಿ ಜೀವಿಸಬೇಕೆಂದು ಪೇತ್ರನು ತಿಳಿಸುತ್ತಿರುವದಿಲ್ಲ. ಯಾಕೆಂದರೆ ಅವನು ದೇವರ ಮಗುವಾಗಿರುವದರಿಂದಲೂ ಮತ್ತು ಆತನೊಂದಿಗೆ ಸಹಭಾಗಿಯಾಗಿರುವದರಿಂದಲೂ; ಹಾಗೂ ಕತ್ತಲೆಯ ಲೋಕವನ್ನ ಆಶ್ಚರ್ಯಕರವಾದ ಬೆಳಕಿಗೆ ತರುವ ಕಾರಣದಿಂದಲೂ ಯೋಗ್ಯವಾಗಿ ಜೀವಿಸಬೇಕೆಂಬದೆ.

ಕ್ರೈಸ್ತನ ಉತ್ತಮವಾದ ಜೀವಿತವು ಕಳೆದು ಹೋದವರನ್ನು ಕ್ರಿಸ್ತನ ಬಳಿಗೆ ನಡೆಸುವಂಥ ಅಂಶವು ಇಲ್ಲಿರುತ್ತದೆ. ಮತ್ತು ಇದರಲ್ಲಿ ಎರಡು ಸಕಾರತ್ಮಕವಾದ ಅರ್ಥಗಳುಂಟು, "ವಿಚಾರಣೆಯ ದಿನದಲ್ಲಿ ದೇವರನ್ನು ಕೊಂಡಾಡುವರು" ವಚನ 12. ಕಳೆದು ಹೋದವರನ್ನು ಕ್ರಿಸ್ತನ ಬಳಿಗೆ ತರುವಲ್ಲಿಯೂ, ಮತ್ತು ಅವರು ಪಾಪದಿಂದ ರಕ್ಷಿಸಲ್ಪಟ್ಟಾಗ ದೇವರಿಗೆ ಮಹಿಮೆ ಉಂಟಾಗುವದು. ಇನ್ನೊಂದು ಸಕಾರಾತ್ಮಕವಾದ ಅರ್ಥವು ದುಷ್ಟನು, ಪಾಪದಲ್ಲಿ ಕಳೆದು ಹೋಗಿ ಮತ್ತು ನಿರೀಕ್ಷೆ ಇಲ್ಲದವನಾಗಿದ್ದರೂ, ಅಂತ್ಯದ ಸಮಯದಲ್ಲಿ ದೇವರ ನೀತಿಯನ್ನು ಮತ್ತು ಉತ್ತಮ ಮಾರ್ಗವನ್ನು ಅರಿಕೆ ಮಾಡುವನು. ಅವರು ಕಳೆದು ಹೋಗಿರುವಂಥದ್ದು ಸಹ, ದೇವರಿಗೆ ಮಹಿಮೆ ಉಂಟು ಮಾಡುತ್ತದೆ ಎನ್ನುವುದು ಪೇತ್ರನ ಹೇಳಿಕೆಯಾಗಿದೆ. ಈ ಎರಡು ವಿಷಯಗಳಲ್ಲಿಯೂ, ಕಾಲವು ಪರಿಪೂರ್ಣವಾಗುತ್ತಿರುವದರಿಂದ, ಮತ್ತು ಕರ್ತನ ಬರೋಣವು ಹತ್ತಿರವಾಗಿರುವದರಿಂದ ಅವರು ಆತನಿಗಾಗಿ ಜೀವಿಸಬೇಕೆಂಬುದೇ, ಪೇತ್ರನು ನೆನಪಿಸುವದಾಗಿದೆ.

## ಒಳ್ಳೇದನ್ನು ಮಾಡಿ ಮತ್ತು ಮೂಡರ ಬಾಯಿಯನ್ನು ಕಟ್ಟಿರಿ (2:13-17)

ಪ್ರಪಂಚಕ್ಕೆ ಅಪ್ಪಣೆ ಮಾಡಲು ಕ್ರೈಸ್ತನಲ್ಲಿ ಸಂದೇಶವು ಇದೆ ಮತ್ತು ಜೀವನ ಶೈಲಿಯು ಸಹ ಇರುತ್ತದೆ. ಇವೆರಡನ್ನು, ಪ್ರತ್ಯೇಕ ಮಾಡಲು ಅಸಾಧ್ಯ. ಆದರೆ ಪ್ರಪಂಚವು ಕ್ರೈಸ್ತರ ಸಂದೇಶವನ್ನು ಅಲಕ್ಷಮಾಡಿದರೂ, ಅವರ ಜೀವನ ಶೈಲಿಯನ್ನು ಅಲಕ್ಷ ಮಾಡಲಾರದು. ಪೇತ್ರನ ಓದುಗರು ತಮ್ಮ ಯೋಗ್ಯವಾದ ಜೀವಿತದ ಮುಖಾಂತರ, ನಿಂದಿಸುವವರ ಬಾಯನ್ನು ಮುಚ್ಚಿಸಿದರು. ಈ ಒಂದು ಹಿನ್ನೆಲೆಯನ್ನು ನಾವು ಅರ್ಥಮಾಡಿಕೊಳ್ಳುವಾಗ, ಅಧೀನತೆಯ ಕುರಿತಾಗಿ ಒಂದು ಬದಲಾವಣೆಯನ್ನು ಇಲ್ಲಿ ನೋಡುತ್ತೇವೆ. "ಯಾವ ಅಧಿಕಾರಕ್ಕಾದರೂ ಕರ್ತನ ನಿಮಿತ್ತ ಅಧೀನರಾಗಿರಿ" (2:13). ಅಧಿಕಾರಕ್ಕೆ ಒಳಗಾಗುವದರಲ್ಲಿ ಅಧೀನತೆಯು ಅಡಗಿತ್ತು, ಇದರಿಂದ ದೈವ ಭಕ್ತಿಯ ಜೀವನ ಸಾಧ್ಯವಾಗಿತ್ತು. ಸ್ವಭಾವ ಸಿದ್ಧವಾಗಿ ಅಧಿಕಾರವು ಹೊಂದಾಣಿಕೆಯನ್ನು ಬಯಸುತ್ತದೆ, ನಾವು ನಿಯಮಗಳನ್ನು ಪಾಲಿಸ ಬೇಕು, ಕಾರ್ಯಕ್ರಮಗಳನ್ನು ನೆರವೇರಿಸಬೇಕು, ಮತ್ತು ಸುಂಕವನ್ನು ನೀಡಬೇಕು. ಕ್ರೈಸ್ತರು ಅಧಿಕಾರಕ್ಕೆ ಸಹಕಾರ ನೀಡಬೇಕೆಂಬುದು, ಹೊಸ ಒಡಂಬಡಿಕೆಯ ಸಾಮಾನ್ಯವಾದ ಕರೆ ಯಾಗಿರುತ್ತದೆ. ಒಂದು ವೇಳೆ ದೇವರನ್ನು ಹಿಂಬಾಲಿಸುವದನ್ನು ಅಥವಾ ಮನುಷ್ಯನನ್ನು ಹಿಂಬಾಲಿಸುವ ವಿಷಯದಲ್ಲಿ ತೀವ್ರವಾದ ಆಯ್ಕೆ ಮಾಡಬೇಕಾದ ಸಂದರ್ಭದಲ್ಲಿ ಮಾತ್ರ ನಿಯಮಾನುಸಾರವಾದ ಅಧಿಕಾರಕ್ಕೆ ಒಳಗಾಗಬಾರದು. ಆ ರೀತಿಯಾದ ಸಮಯವು ನಮಗೆ ಬರಬಹುದು, ಅಪೊಸ್ತಲರಕೃತ್ಯಗಳು 5:29ರಲ್ಲಿ ಪೇತ್ರ ಯೋಹಾನರಿಗೆ ಅಂಥ ಸಮಯವು ಒದಗಿ ಬಂದಿತ್ತು, ಆದರೆ ಅದು ಪುನಃ ಪುನಃ ಬರುವದಿಲ್ಲ. ರೋಮಾಪುರ 13:1-7, 1 ತಿಮೊಥೆ 2:1, 2 ಮತ್ತು ತೀತ 3:1 ಅಧಿಕಾರದಲ್ಲಿರುವವರನ್ನು ಪ್ರಾರ್ಥನೆಯಲ್ಲಿ ನೆನಪು ಮಾಡಿಕೊಳ್ಳಿರಿ. ಅವರು ನಿಂದಿಸುವದಕ್ಕೆ ಅಧಿಕಾರವಿದ್ದರು, "ಅವರು ಕೆಟ್ಟನಡತೆಯುಳ್ಳ ವರನ್ನು ದಂಡಿಸುವದಕ್ಕೂ ಒಳ್ಳೆ ನಡತೆಯುಳ್ಳವರನ್ನು ಪ್ರೋತ್ಸಾಹ ಪಡಿಸುವದಕ್ಕೂ ನೇಮಿ ಸಲ್ಪಟ್ಟಿದ್ದಾರೆ" (2:14). ಈ ವಿಷಯದಲ್ಲಿ ಅವರಿಗೆ ಕ್ರೈಸ್ತರ ಪ್ರೋತ್ಸಾಹ, ಶುಭ ಚಿಂತನೆ ಹಾಗೂ ಪ್ರಾರ್ಥನೆಗಳು ಅವಶ್ಯ ಇರುತ್ತವೆ.

ರೋಮಾಪುರದ ಆಸ್ಯ ಸೀಮೆಯ ಕ್ರೈಸ್ತರು ಮೃದು ಸ್ವಭಾವದ ಅಧೀನತೆಯಲ್ಲಿದ್ದರು, ಅವರು ಅಧಿಕಾರವನ್ನು ಬುಡಮೇಲ ಮಾಡುವವರು ಎಂದು ಪರಿಗಣಿಸಲಾಗಿತ್ತು. ಅರಸನ ಹೆಸರನ್ನು ಹೆಸರಿಸಿದರೆ ಅವರು ಶಿಕ್ಷೆಗೆ ಒಳಗಾಗುತ್ತಿದ್ದರು ಥೆಸಲೋನಿ ಕದಲ್ಲಿಯೂ, ಮೆಕೆದೋನ್ಯದ ರೋಮನ್ನರ ಅಧಿಕಾರದಲ್ಲಿಯೂ, ಕ್ರೈಸ್ತರಿಗೆ ಈ ರೀತಿ ಯಾದ ನಿಂದೆಯನ್ನು ಹೊರಿಸಲಾಗಿತ್ತು. "ಅವರೆಲ್ಲರು ಯೇಸುವೆಂಬ ಬೇರೊಬ್ಬ ಅರಸನು ಇದ್ದಾನೆಂದು ಹೇಳಿ ಚಕ್ರವರ್ತಿಯ ಆಜ್ಞೆಗಳಿಗೆ ವಿರುದ್ಧವಾಗಿ ನಡೆಯುತ್ತಾರೆ ಎಂದು ಕೂಗಿದರು" (ಅಪೊಸ್ತಲರಕೃತ್ಯಗಳು 17:7). ಬಹುಶ ಕೆಲವು ಕ್ರೈಸ್ತರು ಪ್ರಾಪಂಚಿಕ ಅಧಿಕಾರವನ್ನು ಪಡೆಯುವದಕ್ಕಾಗಿ ಅವರನ್ನು ವಿರೋಧಿಸಿರಬಹುದು.

ವಿಷಯಗಳು ಯಥಾಸ್ಥಿತಿಯಲ್ಲಿರ ಬೇಕಾಗಿದ್ದರೆ, ಕ್ರೈಸ್ತರು ನೇಮಕವಾಗಿರುವ ಚಿಕ್ಕ ಮತ್ತು ದೊಡ್ಡ ನಿಯಮಗಳನ್ನು ಪಾಲಿಸಲೇಬೇಕು, ಅವರು ಅದರ ಕುರಿತಾದ ಯಾವುದೇ ತೀರ್ಪನ್ನು ನೀಡಬಾರದು; ಅವರು ಒಳ್ಳೆಯ ಪೌರತ್ವವನ್ನು ಹೊಂದಿರುವವರಾಗಿ, ಅದಕ್ಕೆ ವಿಧೇಯ ರಾಗಬೇಕು. ಅದನ್ನು ಮಾಡದೇ ಹೋದರೆ, ಕಾರಣವಿಲ್ಲದೆ ದೇವರಿಗೂ ಮತ್ತು ಜನರಿಗೂ ನಿಂದೆಯನ್ನು, ವಿವಾದವನ್ನು ಉಂಟುಮಾಡುವವರಾಗಿರುತ್ತಾರೆ. "ಕರ್ತನಿಗೋಸ್ಕರವಾಗಿ" ಎಂದು ಪೇತ್ರನು ತಿಳಿಸುತ್ತಾನೆ 2:15 ನೀವು ಅಧೀನತೆಗೆ ಒಳಗಾಗಿರಿ.

ಈ ಅಧೀನತೆಯ ಹಿನ್ನೆಲೆಯಲ್ಲಿ 2:16ರಲ್ಲಿ ಪೇತ್ರನು: "ಸ್ವತಂತ್ರರಂತೆ ನಡೆದು ಕೊಳ್ಳಿರಿ" ಎಂದು ಹೇಳುವದು ಮೊದಲ ದೃಷ್ಟಿಗೆ ಆಶ್ಚರ್ಯ ತೋರುತ್ತದೆ. ಈ ವಿಷಯಕ್ಕೆ ಅದರದ್ದೇ

ಆದ ಅರ್ಥವಿದೆ. ಅಧೀನತೆಯು, ಸ್ವತಂತ್ರಕ್ಕೆ ಅಕ್ರಮಣ ಮಾಡುವುದಿಲ್ಲ. ಬೇಜವಾಬ್ದಾರಿ ಮತ್ತು ಸ್ವಾರ್ಥವು ಸ್ವತಂತ್ರಕ್ಕೆ ಅಡಚಣೆಯಾಗಿರುತ್ತದೆ. ಅದು ತಾತ್ಕಾಲಿಕ ಸಂತೃಪ್ತಿಗಿಂತಲೂ ಉತ್ತಮವಾದದನ್ನು ನೋಡುವದಿಲ್ಲ.

ಹೊಸ ಒಡಂಬಡಿಕೆಯಲ್ಲಿ, ಸ್ವತಂತ್ರವು ಯಾವಾಗಲು ನಿಯಮದ ಮತ್ತು ಅದನ್ನು ಕಾಪಾಡುವ ಅಂಶವಾಗಿರುತ್ತದೆ. ಯಾಕೋಬನು ಇದನ್ನು "ಬಿಡುಗಡೆಯ ಧರ್ಮಪ್ರಮಾಣ" ಎಂದು ಕರೆದಿದ್ದಾನೆ (ಯಾಕೋಬ 1:25; 2:12; ಗ್ರೀಕ್ ಭಾಷೆಯಲ್ಲಿ ಇದನ್ನು "ಸ್ವತಂತ್ರ" ಎಂದು 1 ಪೇತ್ರ 2:16ರಲ್ಲಿದೆ). ನಿಯಮದ ಹಿನ್ನೆಲೆಯಲ್ಲಿ ಒಬ್ಬ ವ್ಯಕ್ತಿಯು ಇರಲೇಬೇಕು ಎಂದು ಅತಿರೇಖವಾಗಿ ಹೇಳಿರುವದಿಲ್ಲ. ದೇವರ ಮಕ್ಕಳು ಅದನ್ನು ಎಚ್ಚರದಿಂದಲೂ ಮತ್ತು ನ್ಯಾಯವಾದ ತೀರ್ಪಿನಿಂದಲೂ ಉಪಯೋಗಿಸ ಬೇಕು. ಕ್ರೈಸ್ತರ ಸ್ವತಂತ್ರವನ್ನು ಹಕ್ಕಿನಂತೆಯೂ ಮತ್ತು ಸ್ವಾರ್ಥಕ್ಕಾಗಿಯೂ ಉಪಯೋಗಿಸಬಾರದು. ಕ್ರೈಸ್ತನು ಕ್ರಿಯೆಯಲ್ಲಿ ಕ್ರಿಸ್ತನಿಗೆ ಅಡಿ ಆಳಾಗಿದ್ದಾನೆ (2:16).

ದೇವರಿಗೆ ಅಡಿ ಆಳಾಗಿರುವುದೇ ಸ್ವತಂತ್ರ! ಬೇರೆ ವಿಧವಾದ ಆಲೋಚನೆಯು ಯಾವುದೇ ವಿಧವಾದ ಆಶೀರ್ವಾದಗಳನ್ನು ನೀಡವದಿಲ್ಲ. ಪಾಪದಲ್ಲಿರುವ ಕರುಣೆಯಿಲ್ಲದ ಗುಲಾಮತನವು ನಂಬಲಾಗದ ಒತ್ತಾಸೆಯನ್ನು ತರುತ್ತದೆ. ಕೆಲವು ವರ್ಷಗಳ ಹಿಂದೆ ನಗುಮುಖದಿಂದ ಇರುತ್ತಿದ ಒಬ್ಬ ಯೌವನಸ್ಥೆಯ ಪರಿಚಯವಿದೆ. ಆಕೆಯನ್ನು ಕೆಲವು ಸಮಯದವರೆಗೆ ನಾನು ನೋಡಿರಲಿಲ್ಲ, ಒಂದು ದಿನ ಆಕೆಯು ನನ್ನ ಮನೆಯ ಬದಿಯ ರಸ್ತೆಯಲ್ಲಿ ಹಾದು ಹೋಗುವದನ್ನು ಕಂಡೆನು. ಆಕೆಯ ಮುಖವು ಸುಕ್ಕಾಗಿ ವೃದ್ಧಳಂತೆ ಇದ್ದಳು. ಆಕೆಯ ಮುಖದಲ್ಲಿದ್ದ ಚೈತನ್ಯ, ನಗುಮುಖ ಇಲ್ಲವಾಗಿತ್ತು. ಆಕೆಯ ಯೌವನ ಕಾಲದ ಜೀವಿತ ಕ್ಷಮಿಸಲಾರದ ಪರಿಸ್ಥಿತಿಯಲ್ಲಿತ್ತು. ಆಕೆಯು ಮಾದಕ ವಸ್ತುವಿನ ವ್ಯಸನಿಯಾಗಿದ್ದಳು. ಆಕೆಯ ಹಳೆಯ ಜೀವಿತದ ಬಂಧನ ಅವಳನ್ನು ಅಧೈರ್ಯಪಡಿಸಿ ಮತ್ತು ಅವಳಲ್ಲಿ ಕಹಿ ಭಾವನೆಯನ್ನು ಉಂಟುಮಾಡಿತ್ತು. ಆಕೆಯು ಹಿಂತಿರುಗಲಾಗದಂತೆ, ಪಾಪದ ಗುಲಾಮಳಾಗಿದ್ದಳು.

2:17ರಲ್ಲಿ ಸ್ವತಂತ್ರದ ಮತ್ತು ಸಂತೋಷದ ಜೀವಿತವನ್ನು ನಾಲ್ಕು ವಿಧವಾಗಿ ಟಿಪ್ಪಣಿ ಮಾಡಲಾಗಿದೆ: "ಎಲ್ಲರನ್ನು ಸನ್ಮಾನಿಸಿರಿ; ಸಹೋದರರರನ್ನು ಪ್ರೀತಿಸಿರಿ; ದೇವರಿಗೆ ಭಯಪಡಿರಿ, ಅರಸರನ್ನು ಸನ್ಮಾನಿಸಿರಿ." ಗ್ರೀಕ್ ಭಾಷೆಯ ವ್ಯಾಖ್ಯಾನವನ್ನು NIVಯಲ್ಲಿ ನೋಡುತ್ತೇವೆ: "ಎಲ್ಲರಿಗೂ ಸರಿಯಾದ ಮಾನವನ್ನು ಸಲ್ಲಿಸಿರಿ: ವಿಶ್ವಾಸಿಗಳ ಸಹೋದರತ್ವವನ್ನು ಪ್ರೀತಿಸಿರಿ, ದೇವರಿಗೆ ಭಯಪಡಿರಿ, ಅರಸನನ್ನು ಸನ್ಮಾನಿಸಿರಿ" NIVಯ ವಿವರಣೆಯು KJVಯ ವ್ಯಾಖ್ಯಾನಕ್ಕೆ ಸಮಾನವಾಗಿದೆ. "ಎಲ್ಲಾ ಮನುಷ್ಯರನ್ನು ಸನ್ಮಾನಿಸಿರಿ" NIVಯು ಕಡೆಯ ಮೂರು ವಿಷಯಗಳನ್ನು, ಮೊದಲ ವಿಷಯದ ವಿಸ್ತರಣೆ ಮತ್ತು ವಿವರಣೆ ಎಂಬುದಾಗಿ ತಿಳಿಸುತ್ತದೆ. ಇನ್ನೊಂದು ವಾಕ್ಯದಲ್ಲಿ ಎಲ್ಲರನ್ನು ಸಹೋದರತ್ವದಿಂದ ಪ್ರೀತಿಸುವದರ ಮೂಲಕ ಎಲ್ಲಾ ಮನುಷ್ಯರನ್ನು ಸನ್ಮಾನಿಸುತ್ತೇವೆ, ದೇವರಿಗೆ ಭಯಪಡುವ ಹಾಗೂ ಅರಸನನ್ನು ಸನ್ಮಾನಿಸುವ ಮೂಲಕ ಎಲ್ಲರನ್ನು ಸನ್ಮಾನಿಸುತ್ತೇವೆ. ಕ್ರೈಸ್ತ ಕುಟುಂಬವನ್ನು ಪ್ರೀತಿಸುವದು, ದೇವರಿಗೆ ಭಯಪಡುವದು, ಅಧಿಕಾರಕ್ಕೆ ಒಳಗಾಗುವುದು, ಭಯಭಕ್ತಿಯ ಜೀವಿತವಾಗಿರುತ್ತದೆ.

## ಕರ್ತನ ಮಾದರಿಯನ್ನು ಅನುಸರಿಸಿರಿ
## (2:18-25)

ಅಧೀನತೆಯ ಕುರಿತಾದ ಬೋಧನೆಯನ್ನು ಪೇತ್ರನು ಇನ್ನೂ ಸಮಾಪ್ತಿಗೊಳಿಸಿಲ್ಲ. ಪ್ರತಿ ಕ್ರೈಸ್ತನು ದೇವರಿಗೆ ಅಡಿ ಆಳಾಗಿದ್ದಾನೆ. ಆದರೆ ಪೇತ್ರನ ಕೆಲವು ಓದುಗರು ದೈಹೀಕವಾದ ಗುಲಾಮಗಿರಿಯಲ್ಲಿದ್ದರು (2:18). ದನಗಳನ್ನು ಕೊಂಡು ಕೊಳ್ಳುವಂತೆ ಕೆಲವರನ್ನು

ಕೊಂಡುಕೊಂಡಿದ್ದರು. ಅಧಿಕಾರಕ್ಕೆ ಅಧೀನರಾಗುವುದು ಒಂದು ವಿಷಯ ಮತ್ತು ಯಾವುದೇ ವೈಚಾರಿಕತೆ ಇಲ್ಲದ ಒಡೆಯರಿಗೆ ಅಡಿ ಆಳಾಗಿರುವುದು ಮತ್ತೊಂದು ವಿಷಯ. ಒಬ್ಬ ದಯವುಳ್ಳ ಹಾಗೂ ಒಳ್ಳೆಯ ದೇವರು ಹೇಗೆ ತನ್ನ ಸ್ವತಂತ್ರದಲ್ಲಿರುವ ಒಬ್ಬನು, ಮಾನವೀಯತೆ ಇಲ್ಲದ ಇನ್ನೊಬ್ಬನಿಗೆ ದಾಸನಾಗಿ ಸೇವೆ ಮಾಡಬೇಕು ಎಂದು ಬಯಸುತ್ತಾನೆ?

ಪೇತ್ರನ ಸಂದೇಶ ಇದಾಗಿರುತ್ತದೆ. ಸ್ವತಂತ್ರ ಹಾಗೂ ಘನತೆಯು ಬಾಹಿರವಾದ ಪರಿಸ್ಥಿತಿಯ ಮೇಲೆ ಅವಲಂಭಿಸಿರುವದಿಲ್ಲ. ಒಬ್ಬ ಐಶ್ವರ್ಯವಂತನು ಮತ್ತು ಶಕ್ತಿಯುತವಾದ ಮನುಷ್ಯನು ಹೀನಾಯವಾದ ಗುಲಾಮನಾಗಲು ಸಾಧ್ಯವಿದೆ; ಶಕ್ತಿ ಅಥವಾ ಐಶ್ವರ್ಯ ಇಲ್ಲದ ಒಬ್ಬ ಗುಲಾಮನು ಸುಂದರವಾದ ಜೀವಿತವನ್ನು ಮತ್ತು ವಿಶೇಷವಾದ ಆಶೀರ್ವಾದವನ್ನು ಜೀವಿತದಲ್ಲಿ ಅನುಭವಿಸಲು ಸಾಧ್ಯವಿದೆ. ಒಬ್ಬ ಗುಲಾಮನು ಅಧೀನನಾಗುವ ಮೂಲಕ, ದೇವರನ್ನು ಘನಪಡಿಸಬಹುದು, ಮತ್ತು ದೇವರು ನೀಡುವ ಸ್ವಾತಂತ್ರವನ್ನು ತಿಳಿದುಕೊಳ್ಳಬಹುದು.

ಕೆಲವರಿಗೆ ಇನ್ನೊಬ್ಬರು ಇಷ್ಟಪಡುವಂತ ರೀತಿಯಲ್ಲಿ ಜೀವಿಸುವುದು ಅಸಾಧ್ಯ, ಅಥವಾ ಅವರಿಗೆ ಇಷ್ಟವಾಗುವ ರೀತಿಯಲ್ಲಿ ಸಂಗತಿಗಳು ಇದ್ದರೆ ಒಂದು ವೇಳೆ ಒಪ್ಪಿ ಜೀವಿಸಬಹುದು. ಒಬ್ಬ ಗಲಾಮನು ತನ್ನ ಒಡೆಯನಿಗೆ ಅಧೀನನಾಗುವದು ಕೊಂಚ ಕಷ್ಟಕರವೇ. ಯಾವುದೇ ವಿಧವಾದ ಅಧಿಕಾರವಿರಲಿ, ಯಾವುದೇ ವಿಧವಾದ ಧನ್ಯತೆಯು ಇರಲಿ, ಪೇತ್ರನು ತಿಳಿಸಿದ್ದು ಅಧೀನತೆಗೆ ಒಳಗಾಗುವದು, ಯಾತನಮಯ ಮತ್ತು ಅಧೀನತೆಗೆ ಅವಮಾನ (2:19). ಸ್ವಾಭಾವಿಕವಾದ ಮನಸ್ಸು ಒಂದು ಮಾರ್ಗದಲ್ಲಿ ನಡೆಸುತ್ತದೆ, ಮತ್ತು ಕ್ರಿಸ್ತನಲ್ಲಿರುವ ನಂಬಿಕೆ ಇನ್ನೊಂದು ಮಾರ್ಗದಲ್ಲಿ ನಡೆಸುವಾಗ, ಒಬ್ಬ ಕ್ರೈಸ್ತರ ವಿಶ್ವಾಸದ ಪರೀಕ್ಷೆ ಮತ್ತು ಧೈರ್ಯವನ್ನು ಇಲ್ಲಿ ಕಾಣುತ್ತೇವೆ. ಗುಲಾಮರು ವಕ್ರಬುದ್ಧಿಯುಳ್ಳ ಯಜಮಾನರಿಗೂ ಅಧೀನರಾಗಬೇಕು ಎಂದು ಪೇತ್ರನು ಎಚ್ಚರಿಸಿದನು. ಒಂದು ವೇಳೆ ಬಾಧೆಯು ಉಂಟಾಗುವುದಾದರೆ, ಅದು ಕೆಟ್ಟದ್ದಕ್ಕೆ ಬಾರದೆ ಒಳ್ಳೆಯದಕ್ಕೆ ಬರಲಿ.

ಹೊಸ ಒಡಂಬಡಿಕೆಯ ಬರಹಗಾರರು ಗುಲಾಮತನವನ್ನು ಖಂಡಿಸದೆ ಇರುವುದು ಕೆಲವರಿಗೆ ಆಶ್ಚರ್ಯ ಉಂಟು ಮಾಡುತ್ತದೆ. ಪೇತ್ರನ ಹೇಳಿಕೆಯಂತೆಯೇ ಪೌಲನು ಸಹ ಗುಲಾಮತನದ ಕುರಿತು ತಿಳಿಸಿದ್ದಾನೆ (ಎಫೆಸ 6:5-8; ಕೊಲಸ್ಸೆ 3:22-25; 1 ತಿಮೊಥೆ 6:1, 2). ಪೇತ್ರನಾಗಲಿ ಅಥವಾ ಪೌಲನಾಗಲಿ ಗುಲಾಮತನವನ್ನು ಖಂಡಿಸಲಿಲ್ಲ ಯಾಕೆಂದರೆ ಸುವಾರ್ತೆಯು ಮನುಷ್ಯನ ಆಂತರ್ಯವನ್ನು ಬದಲಾಯಿಸಿತ್ತೆ, ವಿನಃ ಅವನ ಬಾಹಿರವಾದ ಪರಿಸ್ಥಿತಿಯನ್ನಲ್ಲ. ಒಬ್ಬ ವ್ಯಕ್ತಿಯು ಕೇವಲ ಒಂದು ಚಿಕ್ಕ ಉಪಕರಣಕ್ಕಾಗಿ ಬದುಕುವುದು, ಒಂದು ಆಡಂಬರದ ಮನೆಗಾಗಿ ಜೀವಿಸುವುದು, ಮತ್ತು ಉತ್ತಮವಾದ ಬಟ್ಟೆಗಾಗಿ ಬದುಕುವುದು ಚಿಂತಾಜನಕವಾಗಿದೆ. ಕೆಲಸದಲ್ಲಿ ನೆಮ್ಮದಿ ಕಳೆದು ಕೊಂಡಿರುವುದು, ದಾಂಪತ್ಯ ಜೀವನದಲ್ಲಿ ಅಥವಾ ಸ್ನೇಹಿತರಲ್ಲಿ ನೆಮ್ಮದಿಯನ್ನು ಕಳೆದುಕೊಂಡಿರುವದು ದಯನೀಯವಾದದ್ದೆ. ಈ ಬಾಹಿರವಾದ ಸಂಗತಿಗಳು ಸಂತೋಷಕ್ಕೆ ಮೂಲ ಎಂಬುದಾಗಿ ತಿಳಿಯುವದು ಸುಳ್ಳಾಗಿರುತ್ತದೆ.

ಗುಲಾಮನ ಭಾದೆಗಳ ಸಹಿಸುವಿಕೆಯ ಪರೀಕ್ಷೆ ನಡೆದ ನಂತರ, ಗುಲಾಮನು ಕ್ರಿಸ್ತನ ಭಾಧೆಗಳು ಎಂಥವು ಎಂಬುದಾಗಿ ನೆನಪು ಮಾಡಿಕೊಂಡನು (2:21). ಭಾರವಾದ ಹೊರೆಯು ಕರ್ತನನ್ನು ಸೋಲಿಸಲಿಲ್ಲ. ಹಾಗೂ ಕ್ರಿಸ್ತನು ಎಲ್ಲರ ಪಾಪಗಳ ನಿಮಿತ್ತವಾಗಿ ಭಾಧೆಯನ್ನು ಅನುಭವಿಸಿದನು, ಇದರಲ್ಲಿ ಗುಲಾಮರು ಸಹ ಸೇರಿಕೊಂಡಿದ್ದಾರೆ. ದೇವರಿಗೆ ಮಹಿಮೆಯನ್ನು ತರುವಾಗ, ಭಾಧೆಗಳನ್ನು ಸಹಿಸಿಕೊಳ್ಳುವ ವಿಷಯದಲ್ಲಿ ಕರ್ತನೇ ಮಾದರಿಯಾಗಿದ್ದಾನೆ. ಅವನು ಪ್ರಶ್ನಿಸಲ್ಪಟ್ಟಾಗ, ಶಾಪಕ್ಕೆ ಪ್ರತಿಯಾಗಿ ಶಾಪವನ್ನು ನೀಡಲು ತನ್ನ ಬಾಯಿಯನ್ನು ತೆರೆಯಲೇ ಇಲ್ಲ. ನ್ಯಾಯವಾಗಿ ತೀರ್ಪು ಮಾಡುವಾತನಿಗೆ ಮನುಷ್ಯರ ಅನೀತಿಯನ್ನು ಒಪ್ಪಿಸಿಬಿಟ್ಟಿದ್ದನು (2:22, 23).

ಗುಲಾಮತನದ ಕುರಿತಾಗಿ, ಪೇತ್ರನು ಮೊದಲನೆಯದಾಗಿ ಕ್ರಿಸ್ತನ ಭಾಧೆಗಳನ್ನು

ತಿಳಿಸಿದನು. ಆದರೆ ಆತನ ಕ್ರೂಜೆಯ ಮರಣದ ಪರಿಣಾಮವು, ಆತನ ಮಾದರಿಗಿಂತಲೂ ಹೆಚ್ಚಾದದ್ದನ್ನು ಬಿಂಬಿಸಿತ್ತು, ಇದರ ನಿಮಿತ್ತ ಗುಲಾಮನು ಆತನ ಹೆಜ್ಜೆಯ ಮಾರ್ಗವನ್ನು ಹಿಂಬಾಲಿಸಬಹುದು. ಯೇಸು ಭಾದೆ ಪಟ್ಟನು, ಯೆಶಾಯ 53:9ರಲ್ಲಿರುವ ಪಾಪರಹಿತನಾದ ಸೇವಕನು ಆತನ ಬಾಯಿಯಲ್ಲಿ ಯಾವ ವಂಚನೆಯ ಮಾತು ಬರಲಿಲ್ಲ. ಯೆಶಾಯ 53ರಲ್ಲಿರುವ ಆತ್ಮನು 2:11-25ರಲ್ಲಿ ಉಸಿರಾಡುವವನಾಗಿದ್ದಾನೆ. ಯಾವ ಹಳೇ ಒಡಂಬಡಿಕೆಯ ಭಾಗವನ್ನು ಐಥಿಯೋಪ್ಯದ ಕಂಚುಕಿಯು ಧ್ಯಾನಿಸುತ್ತಿದ್ದನೋ, ಅದನ್ನೇ ಫಿಲಿಪ್ಪನು ಕಲಿಸಿದನು (ಅಪೊಸ್ತಲರಕೃತ್ಯಗಳು 8:32, 33).

ತಾವು ಜೀವಿಸುತ್ತಿರುವ ಕಾಲಕ್ಕೂ, ಜನಾಂಗಕ್ಕೂ ಸುವಾರ್ತೆಯನ್ನು ಸಾರುವದಕ್ಕೆ ಕರ್ತನು ಸಕಲ ಕ್ರೈಸ್ತರಿಗೆ ಶುಭ ಸಂದೇಶವನ್ನು ವಹಿಸಿಕೊಟ್ಟಿದ್ದಾನೆ, ಅದೇನೆಂದರೆ ದೇವರ ಮಗನು ತನ್ನದಲ್ಲದ ಪಾಪಕ್ಕಾಗಿ ಮರಣವನ್ನು ಅನುಭವಿಸಿದನು. ನಮ್ಮ ಪಾಪದ ಕ್ರಯಕ್ಕಾಗಿ ಬಾಧೆ ಪಟ್ಟನು. ಪ್ರತಿ ಮನುಷ್ಯನು ದೇವರ ಕುರಿಮರಿಯಲ್ಲಿ ನಂಬಿಕೆ ಇಡುವದರಿಂದ, ಅವನ ಪಾಪವು ಸಂಪೂರ್ಣವಾಗಿ ತೊಳೆಯಲ್ಪಡುತ್ತದೆ: "ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆ ಮಾಡಿ ದೇವರ ಚಿತ್ತವನ್ನು ನೆರವೇರಿಸಿದದರಿಂದಲೇ ನಾವು ಶುದ್ಧರಾದೆವು" (ಇಬ್ರಿಯ 10:10). ಆತನ ಬಾಸುಂಡೆಗಳಿಂದ ನಮಗೆ ಗುಣವಾಯಿತು (ಯೆಶಾಯ 53:5).

"ಯೇಸು ನಮ್ಮ ಪಾಪಗಳನ್ನು ಶಿಲುಬೆಯ ಮೇಲೆ ಹೊತ್ತನು" ಎಂದು ಪೇತ್ರನು ತಿಳಿಸಿದ್ದಾನೆ (2:24). NIVಯಲ್ಲಿ ಆ ಕ್ರಿಸ್ತನ ಶಿಲುಬೆಯನ್ನು ಒಂದು "ಮರಕ್ಕೆ" ಹೋಲಿಕೆ ಮಾಡಿರುವುದು ಆಶ್ಚರ್ಯವಾಗಿದೆ. ಅಪೊಸ್ತಲರಕೃತ್ಯಗಳಲ್ಲಿ ಪೇತ್ರನು ಈ ವ್ಯಾಖ್ಯಾನಗಳನ್ನು ಎರಡು ಸಂದರ್ಭಗಳಲ್ಲಿ ಉಪಯೋಗಿಸಿದ್ದಾನೆ. ಮೊದಲನೆಯದಾಗಿ ಅಪೊಸ್ತಲರ ಕೃತ್ಯಗಳು 5:30 ನಂತರ ಅಪೊಸ್ತಲರಕೃತ್ಯಗಳು 10:39. ಪಿಸಿದ್ಯದ ಅಂತಿಯೋಕ್ಯದಲ್ಲಿದ್ದ ಸಭಾಮಂದಿರದಲ್ಲಿ ಪೌಲನು ತನ್ನ ಪ್ರಸಂಗದಲ್ಲಿ ಈ ವಾಖ್ಯವನ್ನು ಉಪಯೋಗಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 13:29). ಇದು ಗಲಾತ್ಯ 3:13ರ ವಾಕ್ಯದ ಪ್ರಭಾವವಿರಬಹುದು, ಇಲ್ಲಿ ಪೌಲನು ಧರ್ಮೋಪದೇಶಕಾಂಡ 21:23ರನ್ನು ವ್ಯಾಖ್ಯಾನಿಸಿದ್ದಾನೆ: "ಮರಕ್ಕೆ ತೂಗಹಾಕಲ್ಪಟ್ಟವನು ದೇವರ ಶಾಪವನ್ನು ಹೊಂದಿದವನಲ್ಲವೇ" ಯೇಸು ಕ್ರಿಸ್ತನು ನಮ್ಮನ್ನು ನಿಯಮಗಳ ಶಾಪದಿಂದ ಬಿಡಿಸಲು ತಾನೇ ಶಾಪವಾದನು ಎಂದು ಪೌಲನು ಬಹಿರಂಗ ಹೇಳಿಕೆಯನ್ನು ನೀಡಿದನು.

## ಮುಕ್ತಾಯ

ಕ್ರೈಸ್ತರು ದೈವ ಭಕ್ತರಾಗಿ ಅಧೀನತೆಯಲ್ಲಿ ಇರಬೇಕೆಂದು ಪೇತ್ರನ ಹೇಳಿಕೆಯಲ್ಲಿ ಹಲವಾರು ಪಾಠಗಳು ಅಡಕವಾಗಿವೆ. ಅವರು ಪ್ರಪಂಚದಲ್ಲಿ ಅನ್ಯರಾಗಿದ್ದಾರೆ ಎಂದು ನೆನಪು ಮಾಡಿದನು. ವಿರೋಧತ್ವವನ್ನು ಮತ್ತು ನಿಂದೆಯನ್ನು ಹೊರೆ ಎಂದು ತಿಳಿದುಕೊಳ್ಳದೆ, ಅದನ್ನು ಸವಾಲಾಗಿ ಸ್ವೀಕರಿಸಬೇಕಿತ್ತು. ಕ್ರೈಸ್ತರ ಉತ್ತಮವಾದ ನಡವಳಿಕೆಯು, ಕ್ರಿಸ್ತನ ಶಿಲುಬೆಯ ವೈರಿಗಳಿಗೆ ಆಶ್ಚರ್ಯ ಉಂಟುಮಾಡುತ್ತಿತ್ತು. ಮೃದು ಭಾವನೆ ಅಥವಾ ರೋಮಾಪುರ 12:19ರ ಪದಗಳನ್ನು ಇಬ್ರಿಯ 10:30ರಲ್ಲೂ ನೋಡುತ್ತೇವೆ "ಮುಯ್ಯಿಗೆ ಮುಯ್ಯಿ ತೀರಿಸುವುದು ನನ್ನ ಕೆಲಸ ಎಂದು ಕರ್ತನು ಅನ್ನುತ್ತಾನೆ."

ಅಧೀನ, ಅಂದರೆ ಅಧಿಕಾರಕ್ಕು ಮತ್ತು ಮನುಷ್ಯರ ಆಡಳಿತಕ್ಕೂ ಒಳಪಡುವದು. ಒಬ್ಬ ಕ್ರೈಸ್ತನು ವ್ಯಯಕ್ತಿಕವಾದ ಯಜಮಾನನಿಗಾಗಲೀ ಅಥವಾ ಸಂಘ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುವಾಗ, ಉತ್ತಮವಾದದನ್ನೇ ಮಾಡಲಿ ಎಂದು ವಿಸ್ತಾರವಾಗಿ ವಿವರಿಸುವ ಅವಶ್ಯವಿರುವದಿಲ್ಲ. ಕ್ರೈಸ್ತನು ಮನುಷ್ಯರ ಅಧಿಕಾರಕ್ಕೆ ಅಧೀನನಾಗುವುದು ಅವನು ದೇವರಿಗೆ ಅಧೀನನಾಗುವ ಕಾರ್ಯಕ್ಕೆ ಸಮಾನವಾಗಿದೆ. ಅಲ್ಲಿ ಅವನು ಮಾಡುವ ಪರಿಣಾಮಕಾರಿಯಾದ ಕ್ರಿಯೆಗಳಿಂದ, ದೇವರಿಗೆ ಘನ ಉಂಟಾಗುತ್ತದೆ.

ಬಾಧೆಗಳು 1 ಪೇತ್ರನಲ್ಲಿ ಅಂತ್ಯಗೊಳ್ಳದೆ, 2:18-25ರಲ್ಲಿ ಪುನಃ ಕಾಣಿಸಿಕೊಳ್ಳುತ್ತದೆ,

ಈ ಸಮಯ ಅದು ಗುಲಾಮನ ವಿಷಯದಲ್ಲಿ ಆಗಿರುತ್ತದೆ. ಈ ಎಲ್ಲಾ ವಿಷಯಗಳಲ್ಲಿ ಕ್ರಿಸ್ತನ ಭಾಧೆಗಳ ಮಾದರಿಯ ಮೂಲಕ, ನಮ್ಮ ಬಾಧೆಗಳನ್ನು ಜಯಿಸುತ್ತೇವೆ. ಆತನು ತನ್ನ ಸ್ವಂತ ಅಪರಾಧಕ್ಕಾಗಿ ಬಾಧೆಪಡದೆ, ಮನುಷ್ಯರೆಲ್ಲರ ಪಾಪಕ್ಕಾಗಿ ಬಾಧೆ ಪಟ್ಟನು.

ಗೌರವವಾಗಿಯೂ ಮತ್ತು ಪರಿಶುದ್ಧವಾದ ಜೀವಿತವನ್ನು ಜೀವಿಸಲು ಸ್ಫೂರ್ತಿಯನ್ನು ನೀಡುವ 2:11-25ರ ವಾಕ್ಯವನ್ನು ಯಾರು ಧ್ಯಾನಮಾಡಬಹುದು?